# ಕರ್ನಾಟಕ ವಿಧಾನಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 980 |
| ಸದಸ್ಯರ ಹೆಸರು | : | ಶ್ರೀ ಎಂ ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 17.12.2024 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | 2019 ರಿಂದ 2023 ರವರೆಗೆ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ (ಬುಡಾ) ವತಿಯಿಂದ ಹಂಚಿಕೆಯಾಗಿರುವ ನಿವೇಶನಗಳ ಸಂಖ್ಯೆ ಎಷ್ಟು; ಈ ನಿವೇಶನಗಳಲ್ಲಿ ಹಿಂದುಳಿದ ಮತ್ತು ಶೋಷಿತ ವರ್ಗದವರಿಗೆ ಹಂಚಿಕೆ ಮಾಡಲಾಗಿರುವ ನಿವೇಶನಗಳೆಷ್ಟು; | ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಿಂದ 2019 ರಿಂದ 2023ನೇ ಸಾಲಿನ ಅವಧಿಯಲ್ಲಿ ಯಾವುದೇ ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ. |
| (ಆ) | ಈ ಅವಧಿಯಲ್ಲಿ ಬುಡಾದಿಂದ ಹಂಚಿಕೆಯಾಗಿರುವ ನಿವೇಶನಗಳಲ್ಲಿ ಹಲವಾರು ನಿವೇಶನಗಳನ್ನು ಶಾಸಕಾಂಗ ಮತ್ತು ಕಾರ್ಯಾಂಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರ ಸಂಬಂಧಿಕರಿಗೆ ಹಂಚಿಕೆಯಾಗಿರುವ ಮಾಹಿತಿ ನಿಜವೇ; ನಿಜವಾದಲ್ಲಿ, ಯಾವ ವರ್ಷದಲ್ಲಿ ಮತ್ತು ಯಾರ್ಯಾರಿಗೆ ನಿವೇಶನಗಳು ಹಂಚಿಕೆಯಾಗಿವೆ; ಮಾಹಿತಿ ನೀಡುವುದು; ಇವರುಗಳಿಗೆ ನಿವೇಶನಗಳನ್ನು ಹರಾಜು ಪ್ರಕ್ರಿಯೆ ಮೂಲಕ ಹಂಚಿಕೆ ಮಾಡಲಾಗಿದೆಯೇ; ಅಥವಾ Manual ಪ್ರಕ್ರಿಯೆ ಮೂಲಕ ಹಂಚಿಕೆ ಮಾಡಲಾಗಿದೆಯೇ; | |
| (ಇ) | ಹಂಚಿಕೆಯಾಗದಿರುವ ನಿವೇಶನಗಳನ್ನು ಸಾರ್ವಜನಿಕರಿಗೆ ಹರಾಜು ಮೂಲಕ ನೀಡಲಾಗಿದೆಯೇ ಅಥವಾ Manual ಪ್ರಕ್ರಿಯೆ ಕೈಗೊಂಡು ಹಂಚಿಕೆ ಮಾಡಲಾಗಿದೆಯೇ; Manual ಪ್ರಕ್ರಿಯೆ ಕೈಗೊಂಡು ಹಂಚಿಕೆ ಮಾಡಿದಲ್ಲಿ ಸರ್ಕಾರಕ್ಕೆ ಆಗಿರುವ ನಷ್ಟವೆಷ್ಟು; Manual ಪ್ರಕ್ರಿಯೆ ಮೂಲಕ ಹಂಚಿಕೆ ಮಾಡಲು ಸರ್ಕಾರದಲ್ಲಿ ಅವಕಾಶವಿದೆಯೇ; | ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ವಿವಿಧ ಯೋಜನೆಯಡಿಯಲ್ಲಿ ಲಭ್ಯವಿದ್ದ ನಿವೇಶನಗಳನ್ನು ಪ್ರಾಧಿಕಾರವು ಸನ್ 2019 ರಿಂದ 2023 ಅವಧಿಯಲ್ಲಿ, ಈ ಕೆಳಗಿನಂತೆ ಇ-ಹರಾಜು/Manual ಹರಾಜು ಮಾಡಿರುತ್ತದೆ. ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br>• ಇ-ಹರಾಜು ಮೂಲಕ ಒಟ್ಟು 316 ನಿವೇಶನಗಳನ್ನು ಹಾಗೂ Manual ಹರಾಜು ಮೂಲಕ ಒಟ್ಟು 90 ನಿವೇಶನಗಳನ್ನು ಹರಾಜು ಮಾಡಲಾಗಿದೆ.<br>• 2019-20ನೇ ಸಾಲಿನಲ್ಲಿ ತಲೆದೋರಿದ್ದ ಕೋವಿಡ್ 19 ರ ಪರಿಣಾಮವಾಗಿ ನಗರ ಪ್ರದೇಶಗಳಲ್ಲಿ ಆರ್ಥಿಕ ಸಂಪನ್ಮೂಲಗಳನ್ನು ಕ್ರೂಢೀಕರಿಸಲು ರಾಜ್ಯದ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಲಭ್ಯವಿರುವ ಮೂಲೆ ನಿವೇಶನ ಮತ್ತು ಬಿಡಿ ನಿವೇಶನಗಳ |

| | | | |
|---|---|---|---|
| | | | ಹರಾಜು ಪ್ರಕ್ರಿಯೆಯನ್ನು ಜೂನ್ ಮಾಹೆಯ ಆರಂಭದಿಂದ ಆದ್ಯತೆಯ ಮೇಲೆ ಕೈಗೊಳ್ಳಲು ಸರ್ಕಾರದ ಪತ್ರ ಸಂಖ್ಯೆ:ನಅಇ 52 ಬೆಮಪ್ರಾ 2020 (ಇ)( ಭಾಗ-1) ದಿನಾಂಕ:15.04.2020 ರಲ್ಲಿ ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ನಿರ್ದೇಶನ ನೀಡಲಾಗಿದೆ.<br>• ನಂತರ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಲಭ್ಯವಿರುವ ನಿವೇಶನಗಳ ಹರಾಜು ಪ್ರಕ್ರಿಯೆ ಕುರಿತು ಆರ್ಥಿಕ ಇಲಾಖೆಯ ಅಭಿಪ್ರಾಯ ಪಡೆಯಲಾಗಿ ಈ ಕೆಳಗಿನಂತೆ ಅಭಿಪ್ರಾಯ ನೀಡಿರುತ್ತದೆ.<br>"Finance Department concurs to the proposed subject to the condition that manual auction will be done only after no response is received during e-auction and the process of manual auction should be conducted in a transparent way and should be video graphed"<br>• ಮೇಲಿನಂತೆ ಆರ್ಥಿಕ ಇಲಾಖೆಯು ನೀಡಿರುವ ಅಭಿಪ್ರಾಯದಂತೆ ಕ್ರಮವಹಿಸಲು ಸರ್ಕಾರದ ಪತ್ರ ಸಂಖ್ಯೆ:ನಅಇ 52 ಬೆಮಪ್ರಾ 2020(ಇ) ದಿನಾಂಕ:24.08.2020 ರ ಪತ್ರದಲ್ಲಿ ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ನಿರ್ದೇಶನ ನೀಡಲಾಗಿದೆ.<br>• ಈ ಬಗ್ಗೆ ಮರು ಪರಿಶೀಲಿಸಿ ಆರ್ಥಿಕ ಇಲಾಖೆಯ ಅಭಿಪ್ರಾಯ ಕೋರಲಾಗಿ ಇ – ಹರಾಜು ಮುಖಾಂತರ ಮೂಲೆ ನಿವೇಶನ ಮತ್ತು ಬಿಡಿ ನಿವೇಶನಗಳನ್ನು ಹರಾಜು ಮಾಡುವುದರಿಂದ ದರಗಳ ನಿಗಧಿಯಲ್ಲಿ ಹೆಚ್ಚಿನ ಪಾರದರ್ಶಕತೆಯನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ ಎಂದು ಆರ್ಥಿಕ ಇಲಾಖೆಯು ಅಭಿಪ್ರಾಯಿಸಿರುವುದರಿಂದ ಸರ್ಕಾರದ ಪತ್ರ ಸಂಖ್ಯೆ: ನಅಇ 52 ಬೆಮಪ್ರಾ 2020 (ಇ)( ಭಾಗ-1) ದಿನಾಂಕ:04.03.2023 ರ ಪತ್ರದಲ್ಲಿ ಮೇಲಿನ ಎರಡು ಪತ್ರಗಳಲ್ಲಿ ನೀಡಿರುವ ನಿರ್ದೇಶನಗಳನ್ನು ಹಿಂಪಡೆದು ಇನ್ನು ಮುಂದೆ ಇ- ಹರಾಜು ಮುಖಾಂತರವೇ ಮೂಲೆ ನಿವೇಶನ ಮತ್ತು ಬಿಡಿ ನಿವೇಶನಗಳನ್ನು ಹಂಚಿಕೆ ಮಾಡಲು ಕ್ರಮ ವಹಿಸುವಂತೆ ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ನಿರ್ದೇಶನ ನೀಡಲಾಗಿದೆ.<br>• ಮುಂದುವರೆದು, ಸನ್ 2022-23 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ Manual ಹರಾಜಿನಿಂದ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ರೂ. 23,21,33,975/- ಗಳ ನಷ್ಟ ಉಂಟಾಗಿರುತ್ತದೆ ಎಂದು ಆಕ್ಷೇಪಣೆ ಮಾಡಲಾಗಿರುತ್ತದೆ. ಸದರಿ ಆಕ್ಷೇಪಣೆಯ ಕುರಿತು ಪರಿಶೀಲಿಸಲಾಗುತ್ತಿದೆ. |

| | | |
|---|---|---|
| ಈ) | ಪ್ರಸ್ತುತ 2024ನೇ ಸಾಲಿನ ಪ್ರಾಧಿಕಾರದ ವತಿಯಿಂದ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲು ಯೋಜಿಸಿದೆ; ಈ ಕಾರ್ಯಕ್ಕಾಗಿ ಭೂಮಿಯನ್ನು ಗುರುತಿಸಿ ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆಯೇ; ಮತ್ತು ಕಾಮಗಾರಿಗಳು ಪ್ರಸ್ತುತ ಯಾವ ಹಂತದಲ್ಲಿವೆ (ಮಾಹಿತಿ ನೀಡುವುದು) | • ಪ್ರಾಧಿಕಾರ ಮತ್ತು ಭೂಮಾಲೀಕರ ಸಹಭಾಗಿತ್ವದಡಿಯಲ್ಲಿನ 50:50 ಅನುಪಾತದಲ್ಲಿ ಯೋಜನೆ ರೂಪಿಸುವ ಕುರಿತು ಕಣಬರ್ಗಿ ಗ್ರಾಮದಲ್ಲಿ ಒಟ್ಟು 159ಎಕರೆ-23ಗುಂಟೆ-08ಆಣೆ ಜಮೀನುಗಳ ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ.<br>• ಸದರಿ ಯೋಜನೆಯಡಿಯಲ್ಲಿ ಒಟ್ಟು 1247 ನಿವೇಶನಗಳು ಇದ್ದು, ಅದರ ಪೈಕಿ ಶೇ. 50% ರಷ್ಟು ನಿವೇಶನಗಳನ್ನು ಹಂಚಿಕೆ ಮಾಡಲು ಪ್ರಾಧಿಕಾರಕ್ಕೆ ಲಭ್ಯವಾಗುತ್ತವೆ.<br>• ಸದರಿ ಯೋಜನೆಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ಟೆಂಡರ್ ಕಾರ್ಯ ಪ್ರಕ್ರಿಯೆಯಲ್ಲಿರುತ್ತದೆ. |
| ಉ) | ಈ ಅನಧಿಕೃತ ಹಂಚಿಕೆ ಕುರಿತು ಉನ್ನತ ಅಧಿಕಾರಿ ಮಟ್ಟದ ವಿಚಾರಣೆ ಕೈಗೊಂಡು ಸರ್ಕಾರಕ್ಕೆ ವರದಿ ಸಲ್ಲಿಸಲು ಸೂಚಿಸಲಾಗಿದ್ದು, ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ? | ಸರ್ಕಾರದ ಆದೇಶ ಸಂಖ್ಯೆ: ನಅಇ 112 ಬೆಮಪ್ರಾ 2023(ಇ), ದಿನಾಂಕ:26.08.2024ರಲ್ಲಿ ಉನ್ನತ ಅಧಿಕಾರ ಮಟ್ಟದ ತಂಡ ರಚಿಸಿ ವಿಚಾರಣೆ ನಡೆಸಲು ಆದೇಶಿಸಲಾಗಿದೆ. ವಿಚಾರಣಾ ವರದಿಯು ಸರ್ಕಾರಕ್ಕೆ ಸಲ್ಲಿಕೆಯಾಗಿರುವುದಿಲ್ಲ. |

ಕಡತ ಸಂಖ್ಯೆ: ನಅಇ 67 ಎಲ್‌ಸಿಕ್ಯೂ 2024(ಇ)

**(ಬಿ.ಎಸ್.ಸುರೇಶ)**
ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು.

| ಅನುಬಂಧ-1 | | | |
|---|---|---|---|
| ಅ.ನಂ. | ಹರಾಜು ಕರೆದ ದಿನಾಂಕ | ಯೋಜನೆ | ಇ-ಹರಾಜು/ಮ್ಯಾನುಅಲ್ ಹರಾಜು ಮಾಡಿದ ನಿವೇಶನಗಳು |
| 1 | 17.06.2020 | 56 | 36 |
| | 04.09.2020 | 47 | 40 |
| 2 | 09.12.2020 | 11 | 33 |
| 3 | 05.03.2022 | 35 | 58 |
| | | 56 | 24 |
| | | 6-2 | 1 |
| | | 51 | 1 |
| 4 | 18.03.2022 ಮ್ಯಾನುಅಲ್ ಹರಾಜು | 56 | 12 |
| | | 35 | 40 |
| | | 47 | 15 |
| | | 11 | 23 |
| 5 | 30.09.2022 | 35 | 62 |
| 6 | 20.02.2023 | 35 | 61 |

Scanned with CamScanner